MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - FRIDAY 4-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಪೌಲ್ಟ್ರಿ ಫೀಡ್ ದರ ಹೆಚ್ಚಳ ಸಾಧ್ಯತೆ

ಜಾಗತಿಕ ಪ್ರಮುಖ ಜೋಳ, ಗೋಧಿ ಉತ್ಪಾದಕ ದೇಶಗಳಾದ ರಷ್ಯಾ, ಉಕ್ರೈನ್ ಗಳಲ್ಲಿನ ಸಂಘರ್ಷ ಪರಿಸ್ಥಿತಿಯಿಂದಾಗಿ ಅಲ್ಲಿಂದ ಜಾಗತಿಕ ಪೂರೈಕೆ ಅನಿಶ್ಚಿತತೆಗೊಳಗಾಗಿದ್ದು ಗೋಧಿ, ಜೋಳ ದರಗಳು ಹೆಚ್ಚಳವಾಗುವ ಸಾಧ್ಯತೆಯಿದೆ. ಅಮೇರಿಕಾ, ದಕ್ಷಿಣ ಅಮೇರಿಕಾ ಮತ್ತಿತರ ದೇಶಗಳಲ್ಲೂ ಪ್ರತಿಕೂಲ ಹವಾಮಾನದಿಂದ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದ್ದು, ಸೋಯಬೀನ್ ಉತ್ಪಾದನೆಯೂ ಇಳಿಕೆಯಾಗಬಹುದೆನ್ನಲಾಗಿದೆ, ಇದರಿಂದ ಪೌಲ್ಟ್ರಿ ಫೀಡ್ ಗೆ ಉಪಯೋಗಿಸುವ ಆಹಾರ ವಸ್ತುಗಳ ದರ ಹೆಚ್ಚಳವಾಗುವ ಸೂಚನೆಯಿದ್ದು, ಮುಂದಿನ ದಿನಗಳಲ್ಲಿ ಪೌಲ್ಟ್ರಿ ಫೀಡ್ ದರಗಳು ಹೆಚ್ಚಳವಾಗುವ ಸಾಧ್ಯತೆಯಿದೆ.

### ಸೋಯಬೀನ್ ಜಾಗತಿಕ ಉತ್ಪಾದನೆ ಇಳಿಕೆ, ಸೋಯಮೀಲ್ ದರ ಹೆಚ್ಚಳ

ಯು.ಎಸ್, ದಕ್ಷಿಣ ಅಮೇರಿಕಾಗಳಲ್ಲಿ ಪ್ರತಿಕೂಲ ಹವಾಮಾನದಿಂದ ಸೋಯಬೀನ್ ಜಾಗತಿಕ ಉತ್ಪಾದನೆ ಇಳಿಕೆಯಾಗಬಹುದೆನ್ನಲಾಗಿದ್ದು ಉಕ್ರೈನ್,ರಷ್ಯಾ ಸಂಘರ್ಷ ಸ್ಥಿತಿಯೂ ದರ ಹೆಚ್ಚಳಕ್ಕೆ ಕಾರಣವಾಗಬಹುದು. ಸೋಯಬೀನ್ ದರ ಹೆಚ್ಚಳವಿರುವುದರಿಂದ, ಸೋಯಮೀಲ್ ದರಗಳೂ ಹೆಚ್ಚಳವಾಗುತ್ತಿದ್ದು, ಮುಂದೆ ಇನ್ನೂ ದರ ಹೆಚ್ಚಳದ ಸಾಧ್ಯತೆಯಿದೆ.

### ಕಾಫಿ ಬೀಜ ದರ ಹೆಚ್ಚಳ

ICE ಕಾಫಿ ಇನ್ ವೆಂಟರಿ ಜಾಗತಿಕ ದಾಸ್ತಾನು 22 ವರ್ಷಗಳ ಕನಿಷ್ಠ ಮಟ್ಟ ತಲುಪುವ ವರದಿ ಮಾಡಿದೆ. ರಾಬೆಸ್ಟಾ ಕಾಫಿ 3 ವರ್ಷಗಳ ಕನಿಷ್ಠ ಮಟ್ಟಕ್ಕಿಳಿಯುವ ವರದಿ ಮಾಡಿದೆ. ರಾಬೆಸ್ಟಾ ಕಾಫಿ ದರ ಒಂದೂವರೆ ತಿಂಗಳ ಗರಿಷ್ಠ ಮಟ್ಟ ತಲುಪಿದ್ದು ಮತ್ತೆ ಸ್ವಲ್ಪ ಮಟ್ಟಿನ ಇಳಿಕೆಯಾಗಿದೆ. ಜಾಗತಿಕ ಕಾಫಿ ರಫ್ತು 2021 ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ವಾರ್ಷಿಕ 1.6 ಶೇಕಡಾ ಇಳಿಕೆಯಾಗಿದ್ದು ಜಾಗತಿಕ ಕಾಫಿ ಮಿಗತೆ (2020–21) ರಲ್ಲಿ 2.41 ಮಿಲಿಯನ್ ಚೀಲಗಳಿಂದ(ಜನವರಿ) ಫೆಬ್ರವರಿ 8ಕ್ಕೆ 1.20 ಮಿಲಿಯನ್ ಚೀಲಗಳಿಗೆ ಇಳಿಕೆ ಮಾಡಿ ICO ಪ್ರಕಟ ಮಾಡಿದೆ. ಜಾಗತಿಕ ಅನಿಶ್ಚಿತತೆ ಪೂರೈಕೆಯ ವ್ಯತ್ಯಯ ಗಳಿಂದ ದರ ಹೆಚ್ಚಳವಿರುವ ಸಾಧ್ಯತೆಯಿದೆ.

### ಹೆಸರುಕಾಳು ಆಮದು ನಿರ್ಬಂಧಿತ

ಹಿಂದಿನ ಕೆಲವು ದಿನಗಳಿಂದ ಹೆಸರುಕಾಳು ಆಮದನ್ನು ಮುಕ್ತದಿಂದ ನಿರ್ಬಂಧಿತ ಮಾಡಿರುವುದರಿಂದ ಈಗಾಗಲೇ ಆಮದು ಒಪ್ಪಂದ ಮಾಡಿಕೊಂಡಿರುವವರು ಸಂಕಷ್ಟಕ್ಕೊಳಗಾಗಿದ್ದಾರೆನ್ನಲಾಗಿದೆ. ಈಗಾಗಲೇ ಆಮದು ಒಪ್ಪಂದ ಮಾಡಿಕೊಂಡ ಕರಾರಿಗೆ ಆಮದು ಅವಕಾಶ ನೀಡಲು ಮನವಿ ಮಾಡಲಾಗುವುದೆನ್ನಲಾಗಿದ್ದು, ಸರಕಾರ ತನ್ನ ಕಾಫಿ ದಾಸ್ತಾನಿನಿಂದ ಹೆಸರುಕಾಳು ಬಿಡುಗಡೆ ಮಾಡಲುದ್ದೇಶಿಸಿದೆಯೆನ್ನಲಾಗಿದೆ.

### ಥೈಲಾಂಡ್ ಅಕ್ಕಿ ರಫ್ತು ದರ ಇಳಿಕೆ, ಭಾರತದ ಅಕ್ಕಿ ರಫ್ತು ಬೇಡಿಕೆ ಹೆಚ್ಚಳ

ಥೈಲಾಂಡ್ ಅಕ್ಕಿ ರಫ್ತು ದರ ಒಂದೂವರೆ ತಿಂಗಳ ಕನಿಷ್ಠ ಮಟ್ಟ ಕ್ಕೆ $ 410–$ 420 ರಿಂದ $ 400 ಕ್ಕೆ ಇಳಿಕೆಯಾಗಿದೆ. ರೂಪಾಯಿ ವಿನಿಮಯ ದರ ದುರ್ಬಲವಿರುವ ಹೊರತಾಗಿಯೂ ಭಾರತದ 5% ಪಾರಾಬಾಯಿಲ್ಡ್ ಅಕ್ಕಿ ರಫ್ತು ಬೇಡಿಕೆ ಹೆಚ್ಚಳವಿದ್ದು, ಆಫ್ರಿಕಾ ಹಾಗೂ ಏಷ್ಯಾಗಳಿಂದ ಉತ್ತಮ ಬೇಡಿಕೆಯಿದೆಯೆನ್ನಲಾಗಿದೆ. ಭಾರತದ ಉತ್ಪಾದನೆ ಈ ವರ್ಷ 127.93 ಮಿಲಿಯನ್ ಟನ್ ಗಳೆನ್ನಲಾಗಿದ್ದು, ಹಿಂದಿನ ವರ್ಷ 124.37 ಮಿಲಿಯನ್ ಟನ್ ಗಳಾಗಿತ್ತೆನ್ನಲಾಗಿದೆ.